3. KA-05/5 53-ಶ್ರೀ ಕೆ.ನಾರಾಯಣ ಬಿನ್ ಕೃಷ್ಣಪ್ಪ, ನಂ.256, 3ನೇ ಮುಖ್ಯರಸ್ತೆ, ಹನುಮಂತನಗರ, ಬೆಂಗಳೂರು.
4. KA-01/A-3051-ಶ್ರೀಮತಿ ನಿಹಾರಿಕ್ ನೂರುಲ್ಲಾ ಖಾನ್, 186, PMK ರಸ್ತೆ, ಶಂಕರಪುರ, ಬೆಂಗಳೂರು.
5. ವಾಹನ ಸಂಖ್ಯೆ: KA-01/B-4903 ಶ್ರೀ ಕೆ.ಎಸ್.ಅಶೋಕ ಕುಮಾರ್.
6. KA-02/A-88-ಶ್ರೀ ಹೆಚ್.ಎಸ್.ಮಹಾಬಲರಾವ್, ಮಾಸ್ಟರ್ ಟ್ರಾವೆಲ್ಸ್, ಬೆಂಗಳೂರು.
7. KA-01/A-3051-ಶ್ರೀಮತಿ ಮಿಶಂತ್ ನೂರುಲ್ಲಾ ಖಾನ್, 180 ಪಂಪಮಹಾಕವಿ ರಸ್ತೆ, ಶಂಕರಪುರ, ಬೆಂಗಳೂರು.

ಈ) ಇದರಿಂದಾಗಿ ಸರ್ಕಾರಕ್ಕೆ ಆದ ಮತ್ತು ಆಗುತ್ತಿರುವ ನಷ್ಟವೆಷ್ಟು?

ಮೇಲ್ಕಂಡ ಅನುಕ್ರಮ ಸಂಖ್ಯೆ: (1) ರಿಂದ (5)ರಲ್ಲಿನ ಪ್ರಕರಣಗಳು ಮಾನ್ಯ ನ್ಯಾಯಾಲಯಗಳಲ್ಲಿ ಬಾಕಿ ಇರುತ್ತವೆ; ಈ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಮಾನದಂತೆ ಕ್ರಮ ಕೈಗೊಳ್ಳಲಾಗುವುದು. ಅನುಕ್ರಮ ಸಂ: (6)ರಲ್ಲಿ ಕಾಣಿಸಿರುವ ವಾಹನ ಸಂ: KA-02/A-88ಕ್ಕೆ ಸಂಬಂಧಿಸಿದಂತೆ, ಮಾನ್ಯ ನ್ಯಾಯಾಲಯದ ಆದೇಶದಂತೆ ಸಾರ್ವಜನಿಕ ಹರಾಜಿಗಾಗಿ ಪೋಲೀಸ್ ಇಲಾಖೆಯನ್ನು ಕೋರಲಾಗಿದೆ, ಈ ವಾಹನದ ಮೇಲೆ ರೂ.13,76,000/–ಗಳ ತೆರಿಗೆ ಬಾಕಿ ಇದೆ. ಅನುಕ್ರಮ ಸಂ:(7)ರಲ್ಲಿ ಕಾಣಿಸಿರುವ ವಾಹನ ಸಂ: KA-01/A-3051ರ ಮೇಲೆ ಒಟ್ಟು ರೂ.10,19,000/– ತೆರಿಗೆ ಬಾಕಿ ಇದೆ. ಸದರಿ ವಾಹನವನ್ನು ಈಗಾಗಲೇ ಸಾರ್ವಜನಿಕ ಬಹಿರಂಗ ಹರಾಜಿನ ಮೂಲಕ ರೂ.1,75,000/–ಗಳಿಗೆ ವಿಲೇ ಮಾಡಲಾಗಿದ್ದು, ಬಾಕಿ ಮೊತ್ತದ ವಸೂಲಾತಿಗೆ ಕ್ರಮ ವಹಿಸಲಾಗಿದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **080(1477)**
ಸದಸ್ಯರ ಹೆಸರು : **ಶ್ರೀ ಅಂಜನಾಮೂರ್ತಿ (ನೆಲಮಂಗಲ)**
ಉತ್ತರಿಸುವ ಸಚಿವರು : **ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು)**

ಅ) 2006–07ನೇ ಸಾಲಿನಲ್ಲಿ ಲೆ.ಶೀ.5054ರ ಅಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖ್ಯರಸ್ತೆಗಳ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾದ ಹಣವೆಷ್ಟು?

2006–07ನೇ ಸಾಲಿನಲ್ಲಿ ಲೆ.ಶೀ.5054ರ ಅಡಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮುಖ್ಯರಸ್ತೆಗಳ ಅಭಿವೃದ್ಧಿಗಾಗಿ ಒಟ್ಟು ರೂ.414.07ಲಕ್ಷಗಳ ಹಣವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಅ) ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಲಾಗಿದೆ (ಪೂರ್ಣ ಮಾಹಿತಿ ನೀಡುವುದು)?

ತಾಲ್ಲೂಕುವಾರು ಬಿಡುಗಡೆ ಮಾಡಲಾದ ಹಣದ ವಿವರಗಳು:

(ರೂ.ಲಕ್ಷಗಳಲ್ಲಿ)

ಕ್ರ.ಸಂ.	ತಾಲ್ಲೂಕುಗಳು	ಹಣ ಭರವಸೆ ಪತ್ರ
1.	ಹೊಸಕೋಟೆ	17.84
2.	ದೊಡ್ಡಬಳ್ಳಾಪುರ	30.57
3.	ದೇವನಹಳ್ಳಿ	14.16
4.	ಕನಕಪುರ	47.21
5.	ರಾಮನಗರ	239.08
6.	ಚೆನ್ನಪಟ್ಟಣ	39.36
7.	ಮಾಗಡಿ	17.35
8.	ನೆಲಮಂಗಲ	8.50
	ಒಟ್ಟು	**414.07**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1081(1478)

ಸದಸ್ಯರ ಹೆಸರು : ಶ್ರೀ ಅಂಜನಾಮೂರ್ತಿ (ನೆಲಮಂಗಲ)

ಉತ್ತರಿಸುವ ಸಚಿವರು : ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)

ಅ) ನೆಲಮಂಗಲ ಪಟ್ಟಣದ ಜನಸಂಖ್ಯೆ 35,000 ಕ್ಕೂ ಮೇಲ್ಪಟ್ಟಿದ್ದು ಕುಡಿಯುವ ನೀರಿನ ಅಭಾವ ತೀವ್ರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ;

ಬಂದಿದೆ.

ಆ) ಕುಡಿಯುವ ನೀರಿನ ಅಭಾವ ಶಾಶ್ವತವಾಗಿ ತಪ್ಪಿಸಲು ಪೀಣ್ಯ – ದಾಸರಹಳ್ಳಿಯಿಂದ ಕಾವೇರಿ ನೀರನ್ನು ಒದಗಿಸಲು ಸರ್ಕಾರ ಆಸಕ್ತಿ ವಹಿಸುವುದೆ?